MYSORE LEGISLATIVE ASSEMBLY

FORTY-FIRST DAY

Saturday, 25th April 1959.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. DEPUTY SPEAKER (SRI L. H. THIMMA BOVI, B.A.) in the Chair.

STARRED QUESTIONS

(to which oral answers were given).

Cases filed in Special First Class Magistrate's Court, Davangere.

*Q.—168. SRI M. RAMAPPA (Harihar).—

Will the Government be pleased to state :—

(*a*) the number of cases filed in the Special First Class Magistrate's Court, Davanagere, under sections 323, 324,325,326,352, 355,302, 143, 147 and 148 of the Indian Penal Code from Davanagere and Harihar Taluks from 1st March 1958 up-to-date ;

(*b*) the number of cases filed in the Court of Sub-Division Officer and *ex-officio* Magistrate, Davanagere, under section 107 of the Code of Criminal Procedure from Davanagere and Harihar Taluks during the above period ?

A.—SRI B. D. JATTI (Chief Minister).—

(*a*)—

Sections	Number of cases filed from 1st March 1958 to 1st March 1959	
	Davanagere Taluk	Harihar Taluk
143 I.P.C.	..	...
147 ,,	3	...
148 ,,	1	...
323 ,,	40	5
324 ,,	10	3
325 ,,	4	...
326 ,,	...	2
352 ,,	9	3
355 ,,	1	...
302 ,,	1	1
Total ...	69	14

(*b*) Section 107 C.P.C.	Davanagere Taluk	Harihar Taluk
	Nil	Nil

ಶ್ರೀ ಎಂ. ರಾಮಪ್ಪ.—ದಾವಣಗೆರೆ ತಾಲ್ಲೂಕಿನಲ್ಲಿ 69 ಕೇಸುಗಳಲ್ಲಿ 323, 324, 352 ಈ ಮೂರು ಸೆಕ್ಷನ್‌ಗಳ ಪ್ರಕಾರ 59 ಕೇಸುಗಳು ಫೈಲ್ ಆಗಿದೆ. ಇಂಥ ತಕ್ಸೀರುಗಳು ನಡೆಯುವುದಕ್ಕೆ ಕಾರಣ ಪೋಲೀಸಿನವರು ಪಕ್ಷವಹಿಸಿರುವುದು ಮತ್ತು preventive measures ಸರಿಯಾದ ರೀತಿಯಲ್ಲಿ ತೆಗೆದುಕೊಳ್ಳದೆ ಇರುವುದು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

Sri B. D. JATTI—According to my information, the police are not siding with any group or political party. Out of the 59 cases most of the cases are only due to the differences between private individuals. Looking to the number of accused also, they do not come from one group or village. So the presumption drawn by the member does not appear to be correct.

ಶ್ರೀ ಎಂ. ರಾಮಪ್ಪ.—ಪೋಲಿಸಿನವರು preventive measures ಸರಿಯಾಗಿ ತೆಗೆದುಕೊಳ್ಳುತ್ತಿಲ್ಲ, ದೂರುಗಳು ಬಂದಾಗ ಸರಿಯಾಗಿ ವಿಚಾರಿಸುವುದಿಲ್ಲ ಎಂದು ಈ ಹಿಂದೆ ಕಾಗದ ಬರೆದಿರುತ್ತೇವೆ. ಇದು ಸತ್ಯವಲ್ಲವೇ ?

ಶ್ರೀ ಬಿ. ಡಿ. ಜತ್ತಿ.— Preventive measures ಯಾವರೀತಿ ತೆಗೆದುಕೊಳ್ಳಬೇಕೆಂಬುದರಲ್ಲಿ ಅಭಿಪ್ರಾಯ ವ್ಯತ್ಯಾಸವಾಗಬಹುದು. ರಾಜ್ಯಾದ್ಯಂತ ಸಂಬಂಧಪಟ್ಟಂಥ ವಿಚಾರ. ಈಗ curative measures ತೆಗೆದುಕೊಂಡಿದೆ, preventive measures ಹೆಚ್ಚಿಗೆ ಮಾಡಲಕ್ಕೆ ಆಗಲಿಲ್ಲ.

———

Expenditure incurred on the Tours of the Ministers and Deputy Ministers.

*Q.—371. Smt. SIDDAVVA MAILAR (Haveri).—

Will the Government be pleased to state :—

(*a*) the names of districts in which different Ministers and Deputy Ministers toured and the number of times they toured from June 1958 up till now ;

(*b*) the total expenditure incurred in connection with the tours of each of them ?

A.—Sri B. D. JATTI (Chief Minister).—

(*a*) *Vide* Columns 3 and 4 of the Statement. (Copy placed on the table of the House).

(*b*) *Vide* Column 5 of the Statement. (Copy placed on the table of the House) (Placed in the Legislature Library No. 13-Bud./59).

ಶ್ರೀಮತಿ ಸಿದ್ದವ್ವ ಮೈಲಾರ್.—ನಚಿವರು ಒಂದೇ ಸಮನೆ ಪ್ರವಾಸ ಕೈಕೊಳ್ಳುವುದರಿಂದ ಜಿಲ್ಲಾ ಮತ್ತು ತಾಲ್ಲೂಕು ಅಧಿಕಾರಿಗಳು ಸರಬರಾಯಿಗಾಗಿ ನಚಿವರ ಹಿಂದೆ ಇರುವುದರಿಂದ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ನಚಿವರಿಗೆ ಯಾವ ಅಧಿಕಾರಿಗಳೇ ಆಗಲಿ ಏನನ್ನೂ ಸರಬರಾಯಿ ಮಾಡುತ್ತಿಲ್ಲ. ಅಸೆಂಬ್ಲಿನದಸ್ಯರು ಮತ್ತು ಕೌನ್ಸಿಲನ ಸದಸ್ಯರು ವಿನಂತಿಮಾಡಿಕೊಳ್ಳುವುದರಿಂದ ಪ್ರವಾಸಹೋಗ ಬೇಕಾಗುತ್ತದೆ.

ಶ್ರೀಮತಿ ಸಿದ್ದವ್ವ ಮೈಲಾರ್.—ಸದಸ್ಯರ ಮನವಿಗಳ ಮೇಲೆ ಹೋಗುತ್ತೀರೋ ಅಥವಾ ತಾವೇ ಜನರ ಕುಂದುಕೊರತೆಗಳನ್ನು ಕಂಡುಕೊಳ್ಳುವುದಕ್ಕೆ ಹೋಗುತ್ತೀರೋ ?

ಶ್ರೀ ಬಿ. ಡಿ. ಜತ್ತಿ.—ಎರಡು ರೀತಿಯಲ್ಲೂ ಮಾಡುತ್ತೇವೆ.

ಶ್ರೀಮತಿ ಸಿದ್ದವ್ವ ಮೈಲಾರ್.—ಇದುವರೆಗೂ ತಾವೇ ಎಷ್ಟುನಲ ಪ್ರವಾಸ ಹೋಗಿದ್ದೀರಿ ಮತ್ತು ಸದಸ್ಯರ ಮನವಿಗಳ ಮೇಲೆ ಎಷ್ಟುನಲ ಹೋಗಿದ್ದೀರಿ?

ಶ್ರೀ ಬಿ. ಡಿ. ಜತ್ತಿ.—ಆ ವಿವರಗಳೆಲ್ಲ ಈಗ ನನ್ನಲ್ಲಿಲ್ಲ.

ಶ್ರೀ ಎ. ಎಸ್. ಪಾಟೀಲ್.—ಕೆಲವು ತಾಲ್ಲೂಕುಗಳಲ್ಲಿ ಮಾನ್ಯ ಮಂತ್ರಿಗಳು ಬಂದು ನೋಡಿಲ್ಲ ಮತ್ತು ಕೆಲವು ತಾಲ್ಲೂಕುಗಳಲ್ಲಿ ಅಲ್ಲಿಯ ಪರಿಸ್ಥಿತಿಯನ್ನು ಅರಿಯಲು ಸಾಧ್ಯವಾಗದೆ ಇರುವಂಥಾದ್ದು ತಮಗೆ ಗೊತ್ತಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಅನೇಕ ತಾಲ್ಲೂಕುಗಳಲ್ಲಿ ಅಲ್ಲಿಯ ಜನರೂ ಮತ್ತು ಅಸೆಂಬ್ಲಿ ಸದಸ್ಯರೂ ತಮ್ಮ ತಮ್ಮ ಪ್ರದೇಶಕ್ಕೆ ಬರಬೇಕೆಂದು ಹೇಳುತ್ತಾರೆ. ಆದರೆ ಒಮ್ಮೊಮ್ಮೆ ಹಾಗೆ ಮಾಡುವುದಕ್ಕೆ ಅಸಾಧ್ಯವಾಗುತ್ತದೆ.

ಶ್ರೀಮತಿ ಸುಶೀಲಾ ಭಾಯಿ ಹೀರಾಚಂದ್‌ಷಾ.—ಮಂತ್ರಿಗಳು ಕೆಲವು ಸದಸ್ಯರ ತಾಲ್ಲೂಕುಗಳಿಗೆ ಬಂದಿಲ್ಲ, ಮತ್ತು ಅಲ್ಲಿಯ ಕೆಲಸಗಳನ್ನು ನೋಡುತ್ತಿಲ್ಲ ಎನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರಾದ ಪಾಟೀಲ್ ಅವರು ಕೇಳಿದುದನ್ನೆ ತಾವೂ ಕೇಳಿದ್ದೀರಿ.

ಶ್ರೀ ಬಿ. ರಾಚಯ್ಯ.—ಆಯಾ ಮಂತ್ರಿಗಳು ತಮ್ಮ ಕ್ಷೇತ್ರದಲ್ಲಿ ಬಹಳ ಹೆಚ್ಚಿಗೆ ಪ್ರವಾಸ ಮಾಡುತ್ತಿರುವುದು ಸಂಪ್ರದಾಯಕ್ಕೆ ಸರಿಹೊಂದುತ್ತದೆಯೇ ?

ಶ್ರೀ ಬಿ. ಡಿ. ಜತ್ತಿ.—ಸಂಪ್ರದಾಯಕ್ಕೆ ಸರಿ ಹೋಗುವುದಿಲ್ಲ, ಆದರೆ ಮಂತ್ರಿಗಳು ತಮ್ಮ ಕ್ಷೇತ್ರದಲ್ಲಯೇ ಹೆಚ್ಚಿಗೆ ಹೋದದ್ದು ನನಗೆ ಗೊತ್ತಿಲ್ಲ. ಈ ಒಂದು ವರ್ಷದೊಳಗೆ ನಾನು ಒಮ್ಮೆ ನನ್ನ ಕ್ಷೇತ್ರಕ್ಕೆ ಹೋಗಿದ್ದೇನೆ.